Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 50 | 05th June 2025

## Classification Talk
## by
## Rtn. Regan Lobo

ವಿಷಯ :

ಟ್ರಾನ್ಸ್‌ಫೋರ್ಟ್ ಉದ್ಯಮ

Time : 7.00 p.m.

Venue : Hotel Shivaprasad Grand, Kundapura

**39th year of Service and Fellowship**

## ಸಂಪಾದಕೀಯ :



ಮಾನವ ಜನ್ಮದಲ್ಲಿ ಬಹಳ ಪ್ರಮುಖ ಘಟ್ಟ ಎಂದರೆ ಅದು ಹದಿಹರೆಯ ಹಾಗೂ ಯೌವನಾವಸ್ಥೆ. ಈ ಸಮಯದಲ್ಲಿ ಜೀವನದ ಉತ್ತಮತೆಗಾಗಿ ಸರಿಯಾದ ಮಾರ್ಗದರ್ಶನ, ಮಾನಸಿಕ ಸ್ವಾಸ್ಥ್ಯ, ಅತ್ಯಂತ ಅಗತ್ಯವಾಗಿರುತ್ತದೆ. ಇವು ಯುವಕರ ಭೌತಿಕ, ಮಾನಸಿಕ, ಶೈಕ್ಷಣಿಕ, ವೃತ್ತಿಪರ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೆರವಾಗುತ್ತವೆ.

ಇತ್ತೀಚಿನ ಯುವಕರಲ್ಲಿ ಮೊಬೈಲ್‌ಗೀಳು ಅತಿಯಾಗಿರುವುದರಿಂದ ಖಿನ್ನತೆ, ಇತ್ಯಾದಿ ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವುದು ವಿಷಾದನೀಯ ವಿಷಯ. ಆದ್ದರಿಂದ ಯುವ ಸೇವೆಗಳು ಅತ್ಯಂತ ಅಗತ್ಯ. ಇದರ ಉದ್ದೇಶಗಳು ಯುವಕರಿಗೆ ಸುರಕ್ಷಿತ ಪರಿಸರ ಒದಗಿಸುವುದು.

ಯುವಕರನ್ನು ಬಲಗೊಳಿಸುವುದು ಎಂದರೆ, ನಮ್ಮ ನಾಡಿನ ಭವಿಷ್ಯವನ್ನೇ ಬಲಗೊಳಿಸುವುದು. ಹೆಚ್ಚಿನ ಯುವಕರಿಗೆ ಈ ಸೇವೆಗಳು ತಲುಪುವಂತೆ ಮಾಡುವುದು ನಮ್ಮೆಲ್ಲರ ಹೊಣೆಗಾರಿಕೆಯೂ ಹೌದು.

2. **ಶೈಕ್ಷಣಿಕ ಮತ್ತು ವೃತ್ತಿ ಬೆಂಬಲ:** ಟ್ಯೂಷನ್, ಶಾಲಾ/ಕಾಲೇಜು ಪ್ರವೇಶ ಸಲಹೆ, ಉದ್ಯೋಗ ತರಬೇತಿ, ಇಂಟರ್ನ್‌ಶಿಪ್ ಮತ್ತು ಕಾರ್ಮಿಕ ಕೌಶಲ್ಯ ಅಭಿವೃದ್ಧಿ.
3. **ಮಾನಸಿಕ ಆರೋಗ್ಯ ಸೇವೆ:** ಸಮಾಲೋಚನೆ, ಉತ್ಸಾಹದ ಅಭಾವ, ಒತ್ತಡ ನಿರ್ವಹಣೆಯ ತರಬೇತಿ.
4. **ಅನಾಥ ಮತ್ತು ಆಶ್ರಯವಿಲ್ಲದ ಯುವಕರಿಗೆ ಸಹಾಯ:** ತಾತ್ಕಾಲಿಕ ಆಶ್ರಯ, ಆಹಾರ, ನೇಮಕಾತಿ ಮಾರ್ಗದರ್ಶನ.
5. **ಕ್ರೀಡೆ, ಕಲೆ ಮತ್ತು ಕೌಶಲ್ಯವರ್ಧನೆ:** ಕ್ರೀಡಾ ತಂಡಗಳು, ನೃತ್ಯ, ಸಂಗೀತ, ಚಿತ್ರಕಲೆ, ಶಿಬಿರಗಳು ಮತ್ತು ಕಾರ್ಯಾಗಾರಗಳು.
6. ನಾಯಕತ್ವ ಮತ್ತು ನಾಗರಿಕ ಭಾವನೆ ಬೆಳೆಸುವುದು:ಯುವ ಮಂಡಳಿಗಳು, ಸಮಾಜ ಸೇವಾ ಯೋಜನೆಗಳು, ಸಂಘಟನೆಗಳ ಸದಸ್ಯತ್ವ.

**ಯುವ ಸೇವೆಗಳ ಪ್ರಯೋಜನಗಳು:**

- ಶಾಲೆಗೆ ಹಾಜರಾತಿ ಮತ್ತು ಪಾಠಶಾಲಾ ಸಾಧನೆ ಹೆಚ್ಚಳ
- ಮಾನಸಿಕ ಆರೋಗ್ಯದಲ್ಲಿ ಸುಧಾರಣೆ
- ಸಾಮಾಜಿಕ ಮತ್ತು ಸಂವಹನ ಕೌಶಲ್ಯಗಳಲ್ಲಿ ಬೆಳವಣಿಗೆ
- ಅಪರಾಧ ಪ್ರವೃತ್ತಿಯಿಂದ ದೂರವಿರುವದು
- ಯುವಕರು ಸ್ವತಂತ್ರ ಹಾಗೂ ಹೊಣೆಗಾರ ನಾಗರಿಕರಾಗಿ ರೂಪುಗೊಳ್ಳುವುದು
- ಲಿಂಗ, ಜಾತಿ, ಆರ್ಥಿಕತೆ ಎಂಬ ಬೇಧಗಳ ಮೀರಿದ ಬೆಳವಣಿಗೆಗೆ ಅವಕಾಶ.

ಈ ನಿಟ್ಟಿನಲ್ಲಿ ರೋಟರಿಯ ಅಂಗಸಂಸ್ಥೆಗಳಾಗಿರುವ 1. ಇಂಟರ‍್ಯಾಕ್ಟ್ ಕ್ಲಬ್ (ವಯಸ್ಸಿನ 12–18 ವರ್ಷ), 2. ರೋಟರ‍್ಯಾಕ್ಟ್ ಕ್ಲಬ್ (18–30 ವರ್ಷ) ಹಲವಾರು ಶಾಲಾ – ಕಾಲೇಜುಗಳಲ್ಲಿ ಸ್ಥಾಪನೆಗೊಂಡು ಕಾರ್ಯನಿರ್ವಹಿಸುತ್ತಿದೆ. ನಮ್ಮ ಕ್ಲಬ್‌ನಿಂದಲೂ ಇಂತಹ ಕಾರ್ಯಾಗಾರಗಳನ್ನು ಆಯೋಜಿಸಿ ಅನೇಕ ಸಮಾಜ ಮುಖೀ ಕಾರ್ಯಗಳನ್ನು ನಡೆಸಿರುವುದು ಹೆಮ್ಮೆಯ ವಿಷಯ.

**– ರೊ. ಡಾ. ಅನುಲೇಖ ಬಾಯರಿ.**

---

## ವಾರದ ವರದಿ

ಮೇ 29, ನಮ್ಮ ಕ್ಲಬ್ಬಿನ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರ ಹುಟ್ಟುಹಬ್ಬವಾಗಿದ್ದು, ರೋಟರಿ ಕುಟುಂಬದೊಂದಿಗೆ ರೋಟರಿ ವಾರದ ಸಭೆಯಾಗಿ ವಿಶಿಷ್ಟ ಅರ್ಥಪೂರ್ಣವಾಗಿ ಆಚರಿಸಿರುವುದು ಅಭಿನಂದನಾರ್ಹ. ಅಂತೆಯೇ ವಾರದ ಸಭೆಯನ್ನು ಅಧ್ಯಕ್ಷರ ನಿವಾಸದಲ್ಲಿ ಬೆಳಿಗ್ಗೆ 8.30ಕ್ಕೆ ಸರಿಯಾಗಿ ನಿಯೋಜಿಸಲಾಗಿತ್ತು. ಹಿರಿಯ ಸದಸ್ಯರಾದ ರೊ. ವಾಸುದೇವ ಕಾರಂತರು ಅಧ್ಯಕ್ಷರಿಗೆ ಕೊರಳಿಗೆ ಲಾಂಛನ ತೊಡಿಸುವುದರ ಮುಖೇನ, ರೊ. ಶ್ರೀನಿವಾಸ ಶೇಟ್‌ರವರ ಮಧುರ ಕಂಠದ ಪ್ರಾರ್ಥನೆಯೊಂದಿಗೆ ಸಭೆಗೆ ಚಾಲನೆ ನೀಡಲಾಗಿತ್ತು. ನೆರೆದಿದ್ದ ಎಲ್ಲಾ ರೋಟರಿ ಸದಸ್ಯರಿಗೆ ಆ್ಯನ್, ಆ್ಯನೆಟ್‌ರವರಿಗೆ ಅಧ್ಯಕ್ಷರು ಪ್ರೀತಿಯ ಸ್ವಾಗತವನ್ನು ಕೋರಿದರು. ಸಭೆಗೆ ಕಾರ್ಯದರ್ಶಿಯಾಗಿ ರೊ. ಸುರೇಖ ಪುರಾಣಿಕರು ಕಳೆದ ವಾರದ ವರದಿಯನ್ನು ಸಭೆಗೆ ಮಂಡಿಸಿದರು. ರೊ. ವಿವಿಯನ್ ಕ್ರಾಸ್ತಾರವರು ವಾರದ ಚಿಂತನೆಯಲ್ಲಿ "ಜೀವನೋತ್ಸಾಹ ಮತ್ತು ಲವಲವಿಕೆ ಇದ್ದಲ್ಲಿ ನಮ್ಮ ಜೀವನ ಸಂತಸಮಯವಾಗಿರುತ್ತದೆ" ಎನ್ನುವ ಹಿರಿಯರ ಮಾತುಗಳನ್ನು ಹೇಳಿದರು. ರೊ. ಕೃಷ್ಣ ಕಾಂಚನ್‌ರವರು ರೋಟರಿ ಮಾಹಿತಿ ನೀಡುತ್ತಾ "ಒಬ್ಬ ಯಶಸ್ವೀ ರೋಟೇರಿಯನ್ ಉತ್ತಮ ಸಾಂಸಾರಿಕ ಹಾಗೂ ವೃತ್ತಿಪರ ನಾಯಕನಾಗಿರಬೇಕು. ಆಗ ಯಶಸ್ವೀ ರೋಟೇರಿಯನ್ ಆಗುತ್ತಾನೆ" ಎಂದರು.

ನಂತರ ಮಾತನಾಡಿದ ಅಧ್ಯಕ್ಷರು ಇವತ್ತು ಮೇ ತಿಂಗಳ 29 – ಗುರುವಾರ ನನ್ನ ಜನ್ಮದಿನವಾಗಿದ್ದು, ನಾನು ನೀಡಿದ Year Plannerನಲ್ಲಿ Meeting with dinner at Presidents Residence ಅಂತ ಯೋಜನೆ ಇತ್ತು. ಆದರೆ ಅದನ್ನು ಸ್ವಲ್ಪ ಬದಲಾವಣೆ ಮಾಡಿ Family Get - together with Breakfast ಮಾಡಿದ್ದೇನೆ. ಈ ವರ್ಷದ ಜನ್ಮದಿನ ಆಚರಣೆಯನ್ನು ರೋಟರಿ ಕುಟುಂಬದೊಂದಿಗೆ ಬೆಳಗಿನ ಉಪಾಹಾರದೊಂದಿಗೆ





ಆಚರಿಸಲು ತುಂಬಾ ಸಂತೋಷವಾಗುತ್ತಿದೆ. ಮಳೆಯ ನಡುವೆಯು ಇಂದಿನ ಸಭೆಗೆ ಆಗಮಿಸಿದ ತಮಗೆಲ್ಲ ಆಭಾರಿಯಾಗಿದ್ದೇನೆ ಎಂದು ವಂದಿಸಿದರು. ಮತ್ತು ಇದೊಂದು ಸ್ಮರಣೀಯ ದಿನಾಚರಣೆಯಾಗಿದೆ ಎಂದು ತಮ್ಮ ಸಂತಸವನ್ನು ಹಂಚಿಕೊಂಡರು.

ಬರುವ ತಿಂಗಳ ಕೊನೆಯ ವಾರ ಜೂನ್ 26ನೇ ಗುರುವಾರ ತಮ್ಮ ಅಧ್ಯಕ್ಷಾವಧಿಯ ಕೊನೆಯ ಸಭೆ ಮತ್ತು ಆ ಸಭೆಯನ್ನು ಕುಟುಂಬ ಸಮ್ಮಿಲನ ಮತ್ತು Thanks giving ಸಭೆಯಾಗಿರುತ್ತದೆ. ಇಡೀ ವರ್ಷದಲ್ಲಿ ಸದಸ್ಯರು ನೀಡಿದ ಸಹಕಾರ – ಪ್ರೋತ್ಸಾಹಕ್ಕೆ ವಂದನೆ ನೀಡುವ ಸಭೆಯನ್ನು ಇರಿಸಿಕೊಂಡಿರುವುದಾಗಿಯೂ ಸಭೆಗೆ ತಿಳಿಸಿದರು. ಸಂತೃಪ್ತ ರೋಟರಿ ವರ್ಷಕ್ಕೆ ಸಹಕರಿಸಿದ ಎಲ್ಲಾ ಸದಸ್ಯರಿಗೆ ಇಂದಿನ ದಿನ ವಿಶೇಷವಾಗಿ ವಂದಿಸುವುದಾಗಿ ತಮ್ಮ ಮನದಾಳದ ಮಾತುಗಳನ್ನು ಆಡಿದರು.

PHF ಪದವಿಯ PIN ಪಡೆದ ನಮ್ಮ ಕ್ಲಬ್ಬಿನ 2ನೇ ಆ್ಯನ್ ಆದ ಆ್ಯನ್ ಶಾಲಿನಿ ಶೆಟ್ಟಿಯವರಿಗೆ ಹಿರಿಯ ಸದಸ್ಯರಾದ ರೊ. ಜಿ. ಸಂತೋಷ್ ಕುಮಾರ್ ಶೆಟ್ಟಿ PIN ಹಸ್ತಾಂತರಿಸಿದರು. PIN ಸ್ವೀಕರಿಸಿದ ಆ್ಯನ್ ಶಾಲಿನಿ ಶೆಟ್ಟಿಯವರಿಗೆ ಅಧ್ಯಕ್ಷರು ಎಲ್ಲರ ಪರವಾಗಿ ಅಭಿನಂದಿಸಿದರು. ಅಲ್ಲದೆ ಜೂನ್ 3ರಂದು ತಮ್ಮ ಮಕ್ಕಳ ಬಳಿ ಅಮೇರಿಕಾಕ್ಕೆ ತೆರಳುತ್ತಿರುವ ರೊ. ಜಿ. ಶ್ರೀಧರ್ ಶೆಟ್ಟಿ ದಂಪತಿಗೆ ಕ್ಲಬ್ಬಿನ ಪರವಾಗಿ ಶುಭ ಪ್ರಯಾಣ ಮತ್ತು ಸಂತೋಷದ ರಜಾದಿನಗಳು ಪ್ರಾಪ್ತವಾಗಲಿ ಎಂದು ಎಲ್ಲರ ಪರವಾಗಿ ಅಧ್ಯಕ್ಷರು ಶುಭಕೋರಿದರು.

ರೊ. ಸತ್ಯನಾರಾಯಣ ಪುರಾಣಿಕರ ನಗೆ ಬುಗ್ಗೆ ನೆರೆದಿರುವ ಎಲ್ಲರನ್ನು ನಗೆಗಡಲಿಗೆ ಕೊಂಡೊಯ್ಯಲು ಸಹಕಾರಿಯಾಯಿತು. ರೊ. ಸೀತಾರಾಮ ನಕ್ಕತ್ತಾಯರವರು ವಂದನೆಗೈದು, ಅಧ್ಯಕ್ಷರು ತಮ್ಮ ನಿವಾಸದಲ್ಲಿ ಏರ್ಪಡಿಸಿದ ತಮ್ಮ ಜನ್ಮದಿನಾಚರಣೆ ಸಂತಸದಾಯಕವಾಗಿದೆ ಎಂದು ವಂದಿಸಿದರು. ಜಿಟಿ– ಜಿಟಿ ಮಳೆಯ ನಡುವೆ ನಗೆ ಚಟಾಕಿಗಳೊಂದಿಗೆ ಉಪಾಹಾರ ಸೇವನೆ – ರೋಟರಿ ಭಾಂದವ್ಯ ವೃದ್ಧಿಗೊಳಿಸುವಲ್ಲಿ ಸಹಕಾರಿಯಾಯಿತು. ಅಧ್ಯಕ್ಷರ ಕುಟುಂಬದ ಸದಸ್ಯರು ಸಂತೋಷದಿಂದ ಎಲ್ಲರಿಗೂ ವಂದಿಸಿದರು.





Rtn. Dr. S. N. Padiyar 1985-86 & 1986-87


Rtn. B. Arun Kumar Shetty 1987-88


Rtn. Dr. H. Rammohan 1988-89


Rtn. K. Shridhar Kamath 1989-90


Rtn. Dr. Anand Nayak 1990-91


Rtn. B. Ramachandra Prabhu 1991-92


Rtn. G. Santhosh Kumar Shetty 1992-93


Rtn. Dr. H. A. Vishweshwar 1993-94


Rtn. Dr. H. R. Hebbar 1994-95



Rtn. K. T. Surendranath 1995-96


Rtn. B. C. Somayaji 1997-98


Rtn. S. Subraya Halambi 1999-2000


Rtn. K. Seetharama Nackathaya 2001-02


Rtn. Dr. Umesh Puthran 2003-04


Rtn. A. Shantharam Pai 2005-06

## Rotary Information

### Priorities in Rotary

1. **Family:** First priority in Rotary is Family.Fist of all one should be a successful person in their Family.
2. **Profession:** One should be a leader in their profession.
3. **Rotary:** once you are a successful person in the above priorities then only you may become a successful Rotation.

**By Rtn. K. K. Kanchan**

ಇಷ್ಟು ಕಾಲ ಒಟ್ಟಿಗಿದ್ದು
ಎಷ್ಟು ಬೆರೆತರೂ
ಅರಿತೆವೇನು ನಾವು
ನಮ್ಮ ಅಂತರಾಳವ ॥

ಕಡಲ ಮೇಲೆ ಸಾವಿರಾರು
ಮೈಲಿ ಸಾಗಿಯೂ ನೀರಿನಾಳ
ತಿಳಿಯಿತೇನು ಹಾಯಿ ದೋಣಿಗೆ

ಸದಾಕಾಲ ತಬ್ಬುವಂತೆ ಮೇಲೆ
ಬಾಗಿಯೂ ಮಣ್ಣ ಮುತ್ತು
ದೊರಕಿತೇನು ನೀಲಿ ಬಾನಿಗೆ

**– ಎಚ್. ಎಸ್. ವೆಂಕಟೇಶಮೂರ್ತಿ**

### ಕಳೆದ ವಾರದ ಚಿಂತನೆ

ಹದಿನೈದು ದಿನಗಳ ಹಿಂದೆ ರೊ. ಕೆ. ಟಿ. ಸುರೇಂದ್ರನಾಥ್‌ರವರು ತಮ್ಮ 88ನೆಯ ಜನ್ಮದಿನವನ್ನು ನಮ್ಮ ಸಾಪ್ತಾಹಿಕ ಸಭೆಯಲ್ಲಿ ಎಲ್ಲಾ ಸದಸ್ಯರೊಡನೆ ಆಚರಿಸುವ ಮುನ್ನ ಫೆಲೋಶಿಪ್‌ನಲ್ಲಿ ಅವರೊಂದಿಗೆ ಮಾತನಾಡುತ್ತಾ, ನನ್ನ ಸಂದೇಹವನ್ನು ನಿವಾರಿಸಲು ಅವರೊಂದಿಗೆ ಅವರ ಪ್ರಾಯವನ್ನು ಕೇಳಿದೆ. ಅದಕ್ಕವರು ಕೊಟ್ಟ ಉತ್ತರ, **"ನನಗಿವತ್ತು ಹದಿನೆಂಟು ವರುಷ ಪ್ರಾಯ ತುಂಬಿತು. ಅದರೊಂದಿಗೆ ಎಪ್ಪತ್ತು ವರುಷದ ಜೀವನಾನುಭವ ಕೂಡಾ ಸಿಕ್ಕಿತು"** ಎಂದರು. ಇದುವೇ ಜೀವನೋತ್ಸಾಹ ಹಾಗೂ ಲವಲವಿಕೆ. ಇಂದು ತಮ್ಮ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುವ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರಿಗೆ ಹಾಗೂ ನಮಗೆಲ್ಲರಿಗೂ ರೊ. ಕೆ. ಟಿ. ಸುರೇಂದ್ರನಾಥರ ಈ ಮಾತುಗಳು ಮಾದರಿಯಾಗಿರಲಿ.

– ರೊ. ವಿವಿಯನ್ ಕ್ರಾಸ್ಟೋ

### ಹುಟ್ಟುಹಬ್ಬದ ಶುಭಾಶಯಗಳು



ರೊ. ಭರತ್ ಶೆಟ್ಟಿ
ದಿನಾಂಕ : ಜೂನ್ 11
ಮೊಬೈಲ್ : 9964291755

## The 4 Way Test

*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com


Rtn. S. Sadananda Chatra 1996-97


Rtn. K. Suresh Kamath 1998-99


Rtn. S. Vijaya Shetty 2000-01


Rtn. U. S. Shenoy 2002-03


Rtn. Dr. B. V. Udupa 2004-05


Rtn. K. Shantharam Prabhu 2006-07


Rtn. T. Raghavendra Hatwar 2007-08


Rtn. K. Shankar 2008-09


Rtn. S. Jayakar Shetty 2009-10


Rtn. K. K. Kanchan 2010-11


Rtn. Abhinandan A. Shetty 2011-12


Rtn. Vivian Crasto 2012-13


Rtn. G. Shreedhar Shetty 2013-14


Rtn. K. P. Bhat 2014-15



Rtn. P. Vasudeva Karanth 2015-16


Rtn. Aouzline F. Rebello 2016-17



Rtn. J. Srinath Rao 2017-18


Rtn. Johnson D' Almeida 2018-19


Rtn.Devaraj 2019-20


Rtn. Dr. Uttam Kumar Shetty 2020-21


Rtn.Mahendr Shetty 2021-22


Rtn.Sathyanarayana Puranik 2022-23


Rtn.Suresh Mallya 2023-24

*This Bulletin is sponsored by :*
Rtn. Dr. Umesh Puthran
Mob. : 9448068168

For Private Circulation only